**ಅಸಲು ದಾವಾ ನಂ:09/2020**
**ಪಿ.ಡಬ್ಲ್ಯೂ:01**

**ದಿನಾಂಕ: 20-10-2022 ರಂದು ಮಧ್ಯಾಹ್ನ ಅವಧಿಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಎಚ್ ಎನ್ ಎನ್ ಪ್ರತಿವಾದಿ ಪರ ವಕೀಲರಿಂದ**

6. ನಾವು ಪಣಿಯಪ್ಪನವರ ವಂಶಜರು ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ನಾನು ವಾದ ಪತ್ರದೊಂದಿಗೆ ನಮ್ಮ ವಂಶದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ವಂಶವೃಕ್ಷವನ್ನು ಕಾಲ್ಪನಿಕವಾಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ಭಕ್ತ ಪಣಿಯಪ್ಪನ ವಂಶಜರು ಎಂದರೆ ಸರಿಯಲ್ಲ. ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠ ಅರ್ಚಕರು ಎಂದರೆ ಅದು ಭಕ್ತ ಪಣಿಯಪ್ಪನ ವಂಶಜರು ಎಂದರೆ ಸರಿ. ಸದರಿ ದೇವರ ಪೂಜೆಯನ್ನು 4 ವಂಶದವರು ಮಾತ್ರ ಪೂಜೆಯನ್ನು ಮಾಡುತ್ತಾರೆ. ಆ ನಾಲ್ಕು ವಂಶದವರು ಎಂದರೆ ಮೂಲ ಮನೆ ಶಿವರುದ್ರಪ್ಪ, ಎರಡನೇ ಶಿವಲಿಂಗಪ್ಪ, ಮೂರನೇ ಭೂಪ ಸಮುದ್ರದ ಶಿವಣ್ಣ ಹಾಗೂ ಚೆಲುವರುದ್ರಪ್ಪನ ವಂಶಜರು ಆಗಿರುತ್ತಾರೆ.

7. ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ವಂಶಜರು ಎಂದರೆ ಎರಡನೇ ಶಿವಲಿಂಗಪ್ಪರವರು ಆಗಿರುತ್ತಾರೆ. ನಮ್ಮದು ಮೂಲ ಮನೆ ಶಿವರುದ್ರಪ್ಪರವರ ವಂಶಕ್ಕೆ ಸೇರಿರುತ್ತೇವೆ. ಮೇಲೆ ಹೇಳಿದ 4 ವಂಶದವರು ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠದ ವಂಶ ಪಾರಂಪರ್ಯ ಅರ್ಚಕರ ವಂಶಸ್ಥರು ಎಂದರೆ ಸರಿ. 1939, 1945, ದಿ:06-06-1977 ಮತ್ತು ದಿ:23-08-1939 ರಲ್ಲಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳು ನಡೆಸಿದ ಮಿಟಿಂಗ್ ಪ್ರೊಸಿಡಿಂಗ್ಸ್ ನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಮಾನ್ಯ ನ್ಯಾಯಾಲಯದಲ್ಲಿ ಈಗಾಗಲೇ ಸದರಿ ದಾಖಲೆಗಳನ್ನು ನಿಪಿ:26 ರಿಂದ ನಿಪಿ:28 ಎಂದು ನಿಶಾನೆಗಳಾಗಿ ಗುರುತಿಸಲಾಗಿರುತ್ತದೆ.

8. ನಾನು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ವಿರುದ್ಧ ದ್ವೇಷದಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಭಕ್ತ ಪಣಿಯಪ್ಪನ ವಂಶಜರು ಎಂದರೆ ಅದು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ಎಂದರೆ ಸರಿಯಲ್ಲ. ಶಿವಲಿಂಗಪ್ಪ ಮತ್ತು ಚೆಲುವರುದ್ರಪ್ಪ ರವರುಗಳು ಮೂಲತಃ ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ. ಸದರಿ ಕಾರಣದಿಂದಾಗಿ ಭಕ್ತ ಪಣಿಯಪ್ಪನ ವಂಶಜರು ಎನ್ನುವ ಕಾರಣದಿಂದ ಶಿವಲಿಂಗಪ್ಪನ

ಕುಟುಂಬಸ್ಥರಾದ ಎಸ್ ಪಿ ತಿಪ್ಪೇಸ್ವಾಮಿ ಅಂದರೆ ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ತಂದೆ ಮತ್ತು ಚೆಲುವರುದ್ರಪ್ಪ ನ ವಂಶಕರಾದ ಸಿ ನಾಗರಾಜು ಅಲಿಯಾಸ್ ರಾಜಣ್ಣ ರವರು ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠ ಅರ್ಚಕರು ಆಗಿದ್ದರು ಎಂದರೆ ಸರಿಯಲ್ಲ.

9. ಸಿ ನಾಗರಾಜು ಅಲಿಯಾಸ್ ರಾಜಣ್ಣ, ಮತ್ತು ಅವರ ಅಣ್ಣ ತಮ್ಮಂದಿರ ಮಕ್ಕಳಾದ ದಿನೇಶ ಕುಮಾರ ತಂದೆ ಪುಟ್ಟಲಿಂಗಪ್ಪ, ಅಭಿಷೇಕ ತಂದೆ ಪಿ ಸಿ ತಿಪ್ಪೇಸ್ವಾಮಿ, ರವಿಕುಮಾರ ತಂದೆ ರುದ್ರಮುನಿಯಪ್ಪ ರವರನ್ನು ಈ ನ್ಯಾಯಾಲಯದ ಮುಂದೆ ಕರೆಸಿ ಸಾಕ್ಷಿ ವಿಚಾರಣೆ ನಡಸೆಲು ಯಾವುದೇ ತೊಂದರೆ ಇರುವುದಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.

**ಅಸಲು ದಾವಾ ನಂಃ09/2020**
**ಪಿ.ಡಬ್ಲ್ಯೂ:01**

**ದಿನಾಂಕಃ 20-10-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಶ್ರೀ ಎಚ್ ಎನ್ ಎನ್ ಪ್ರತಿವಾದಿ ಪರ ವಕೀಲರಿಂದ

ನನಗೆ 48 ವರ್ಷ ವಯಸ್ಸು. ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯದೊಂದಿಗೆ ಚಿಲ್ಲರೆ ಅಂಗಡಿಯನ್ನು ನಡೆಸುತ್ತೇನೆ. ನಮ್ಮ ವಂಶದ ಪೂರ್ವಜರನ್ನು **ಮೂಲ ಮನೆ** ಎಂದು ಕರೆಯುತ್ತಾರೆ. ನನ್ನ ತಂದೆಯವರ ಹೆಸರು ಪಿ ಎಸ್ ಪಣಿಯಪ್ಪ. ಸದರಿಯವರು ಮರಣ ಹೊಂದಿರುತ್ತಾರೆ. ನನ್ನ ತಂದೆಯವರಿಗೆ ನಾವು 4 ಜನ ಮಕ್ಕಳು ಜನಿಸಿರುತ್ತೇವೆ. ತ್ರೀವೇಣಿ, ಪ್ರಸನ್ನ, ವಿದ್ಯಾವತಿ ಮತ್ತು ನಾನು ಆಗಿರುತ್ತೇವೆ. ನಾನು 8 ನೇ ತರಗತಿಯವರೆಗೆ ನಾಯಕನಹಟ್ಟಿ ಗ್ರಾಮದಲ್ಲಿ ವ್ಯಾಸಂಗ ಮಾಡಿರುತ್ತೇನೆ.

2. ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ನನಗೆ ಪರಿಚಯಸ್ಥರು. ನಮ್ಮ ವಂಶಕ್ಕೂ ಮತ್ತು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ವಂಶಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಮತ್ತು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ಮತ್ತು ಉಭಯ ಕುಟುಂಬದವರು ಒಂದೇ ಊರಿನಲ್ಲಿ ಈಗಲೂ ಸಹ ವಾಸ ಇದ್ದೇವೆ.

3. ನಾವು ಪಣಿಯಪ್ಪ ವಂಶಕ್ಕೆ ಸೇರಿದವರಾಗಿದ್ದು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ಸದರಿ ಪಣಿಯಪ್ಪ ವಂಶಕ್ಕೆ ಸೇರಿರುವುದಿಲ್ಲ ಎಂದು ಪ್ರಸ್ತುತ ದಾವೆಯನ್ನು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ವಿರುದ್ಧ ದಾಖಲಿಸಿರುತ್ತೇನೆ. ಪ್ರಸ್ತುತ ದಾವೆಯನ್ನು ನನ್ನ ಮತ್ತು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರ ನಡುವೆ ಇತ್ಯರ್ಥಕ್ಕೆ ಬಾಕಿ ಇರುವ ದಾವೆಯೊಂದಿಗೆ ಇನ್ನೂ ಇತರೇ ದಾವೆಗಳು, ಪ್ರಕರಣಗಳು ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠದ ವಂಶ ಪಾರಂಪರ್ಯ ಪೂಜಾರಿಕೆ ವಿಚಾರವಾಗಿ ಇತ್ಯರ್ಥಕ್ಕೆ ಬಾಕಿ ಇವೆ. ಅವುಗಳೆಂದರೆ ಡಿ ಸಿ ನ್ಯಾಯಾಲಯ ಚಿತ್ರದುರ್ಗ, ಹಿಂದೂ ಧಾರ್ಮಿಕ ದತ್ತಿ ಆಯುಕ್ತರು ಮತ್ತು ಇಲಾಖೆ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ಪೂಜಾರಿಕೆ ವಿಚಾರವಾಗಿ ಇತ್ಯರ್ಥಕ್ಕೆ ಬಾಕಿ ಇವೆ.

4. ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರು ಪೂಜಾರಿಕೆ ವಿಚಾರವಾಗಿ ರಿಟ್ ಅರ್ಜಿ ನಂ.10523/2021 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ನನ್ನನ್ನು ಕೂಡ ಪಕ್ಷಗಾರರನ್ನಾಗಿ

ಮಾಡಿರುತ್ತಾರೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ನಾನು ನನ್ನ ವಕೀಲರ ಮುಖಾಂತರ ವಕಾಲತ್‌ನಾಮೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಪ್ರತಿವಾದಿ ಪಿ ಟಿ ಶಿವಲಿಂಗಮೂರ್ತಿಯವರನ್ನು ಸೇರಿದಂತೆ ತಾತ್ಕಲಿಕವಾಗಿ ಚೆಲುವರುದ್ರಪ್ಪನ ವಂಶಕರಾದ ದಿನೇಶ ಕುಮಾರ, ರವಿಕುಮಾರ, ಅಭಿಷೇಕ, ಹಾಗೂ ಪಿ ಸಿ ತಿಪ್ಪೇಸ್ವಾಮಿರವರಿಗೆ **ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠದ ವಂಶ ಪಾರಂಪರ್ಯ ಪೂಜಾರಿಕೆ** ಮಾಡಿಕೊಂಡು ಹೋಗಲು ಆದೇಶ ನೀಡಿರುತ್ತದೆ ಎಂದರೆ ಸರಿ. ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ನಮಗೆ ಸದರಿ ಪೂಜಾರಿಕೆ ಮಾಡಿಕೊಂಡು ಹೋಗಲು ಯಾವುದೇ ಆದೇಶವಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಈ ದಿನದವರೆಗೂ ಸಹ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಒಳಮಠದ ಅಲಂಕಾರಿಕ ಪೂಜೆಯನ್ನು ನಮ್ಮ ಕುಟುಂಬದವರು ಮಾಡಿಕೊಂಡು ಬರುತ್ತಿದ್ದೇವೆ.

5. ಪ್ರಸ್ತುತ ದಾವೆಯಲ್ಲಿ ನಾವು ಭಕ್ತ ಪಣಿಯಪ್ಪನ ವಂಶಸ್ಥರು ಎಂದು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ನಾವು ಭಕ್ತ ಪಣಿಯಪ್ಪನ ವಂಶಸ್ಥರು ಎಂದು ತೋರಿಸಲು ಮಾನ್ಯ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ.

**(ನ್ಯಾಯಾಲಯದ ಬೆಳಗಿನ ಅವಧಿ ಮುಕ್ತಾಯಗೊಂಡ ಕಾರಣ ಸದರಿ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.